ಅವರು ಏನು ಮಾಡುತ್ತಿದ್ದರೋ ನನಗೆ ಗೊತ್ತಾಗಲೇ ಇಲ್ಲ– ಯಾವುದೋ ಇಂಜೆಕ್ಷನ್ ನನ್ನ ಬಲ ತೋಳಿಗೆ ಅವರು ಚುಚ್ಚಿರಬೇಕು. ಅಷ್ಟೆ ಎಚ್ಚರ! ನಿದ್ರೆಯ ಮಂಪರು ಗಾಢವಾಗಿ ಕ್ರಮೇಣ ನನ್ನನ್ನು ಆವರಿಸಿದಂತಾಯಿತು.

ಪುನಃ ಕಣ್ಣುಬಿಟ್ಟಾಗ ಆರೂವರೆ ಗಂಟೆಯಾಗಿತ್ತು. ಎದುರಿಗೇ ಕುಳಿತ ಡಾ|| ಸಿಂಗ್ ಅವರು ನನ್ನ ಬೆನ್ನುತಟ್ಟಿ ಮೇಲೆಬ್ಬಿಸಿ – 'ಬನ್ನಿ ಹೋಗೋಣಂತೆ. ಆಗಲೇ ತುಂಬಾ ಹೊತ್ತಾಯ್ತು' – ಎಂದರು. ನಾನು ಚಟ್ಟನೆ ಮೇಲೆದ್ದು ನಿಂತೆ. ಅವರ ಜೊತೆಗೇ ನಡೆಯುತ್ತ ಕ್ಲಿನಿಕ್‌ನ ವೇಟಿಂಗ್ ರೂಮಿಗೆ ಬಂದೆ. ಅಲ್ಲಿ ಆ ಗಣೇಶಯ್ಯ ನನಗಾಗಿ ಕಾತರನಾಗಿ ಕಾಯುತ್ತಿದ್ದ. ನನ್ನ ಮುಖ ಕಂಡ ತಕ್ಷಣ ಅವನು ಮುಗುಳ್ನಗುವಿನೊಂದಿಗೆ ಮೇಲೆದ್ದು ನಿಂತ– ಡಾ|| ಸಿಂಗ್ ಅವರಿಗೆ ನಮ್ಮ ತಪಾಸಣೆ ಬಗ್ಗೆ ಫೀ ಕೊಟ್ಟು ಅವರಿಂದ ಬೀಳ್ಕೊಂಡು ವೇಗವಾಗಿ ಬಸ್‌ನಿಲ್ದಾಣಕ್ಕೆಂದೇ ಬಂದೆವು.

ಗಣೇಶಯ್ಯನಿಗೆ ಕುತೂಹಲ ತಡೆಯಲಾರದಾಯಿತು. 'ಏನು ಹೇಳಿದ್ರು ಡಾಕ್ಟ್ರು? ಏನೂ ಔಷಧಿ ಕೊಡಲಿಲ್ವ? ಟಾನಿಕ್ ಏನಾದ್ರೂ ಹೇಳಿದ್ರಾ?' ಎಂದು ಪ್ರಶ್ನೆ ಹಾಕತೊಡಗಿದ. ನನ್ನ ಮಿದುಳು ಮತ್ತೆ ಕಾರ್ಯತತ್ಪರವಾಗುತ್ತ ಹಾಗೇ ಯೋಚಿಸತೊಡಗಿತು. ಡಾ|| ಸಿಂಗ್ ನನ್ನ ಬಗ್ಗೆ ಏನು ಹೇಳಿದ್ದರು? ಎಲ್ಲೋ ಆ ಮಾತು ತಳ ಸೇರಿದ ಹಾಗಾಯ್ತಲ್ಲ. ತೀವ್ರವಾಗಿ ನಾನು ಡಾ|| ಸಿಂಗ್ ಅವರ ಸಲಹೆಯನ್ನೇ ಮಿದುಳಿನನಾಳದಲ್ಲಿಳಿದು ಹುಡುಕತೊಡಗಿದೆ. ಹಾ... ಸಿಕ್ಕಿತು... ಹೌದು... ಇದೇ ಸಿಂಗ್ ಹೇಳಿದ ಮಾತು– 'ನೀವು ಇನ್ನೆರಡು ತಿಂಗಳು ಏನುಬೇಕಾದರೂ ಮಜಾ ಮಾಡಿ ನೀವು ಬದುಕಿರೋದು ಇನ್ನೆರಡೇ ತಿಂಗಳು' ಅಬ್ಬಬ್ಬಾ... ಎಂಥ ಘೋರ ಸತ್ಯ! ಇದನ್ನು ನಾನು ಈ ಗಣೇಶಯ್ಯನಿಗೆ ಹೇಳಲೋ ಬೇಡವೋ? ಏಕೆ ಹೇಳಬೇಕು? ಒಂದುವೇಳೆ ನಾನು ಈತನ ಜೊತೆಗೆ ಇಂದು ಈ ಸಿಂಗ್ ಅವರ ಕ್ಲಿನಿಕ್ಕಿಗೇ ಬರದೇ ಇದ್ದಿದ್ದರೂ, ಇನ್ನೆರಡು ತಿಂಗಳಲ್ಲೇ ನಾನು ಸಾಯುವುದಂತೂ ನಿಶ್ಚಿತವೇ ಆಗಿತ್ತು. ಈಗ ಡಾ|| ಸಿಂಗ್ ಅವರು ತಪಾಸಣೆ ಮಾಡಿ ಕಂಡುಹಿಡಿದ ಅಪ್ರಿಯ ಸತ್ಯ ನನಗೂ ಗೊತ್ತಾಗಿದೆಯಷ್ಟೆ! ಏನಾರಾಗಲಿ... ಈ ಕಟುಸತ್ಯವನ್ನು ನನ್ನಲ್ಲಿಯೇ ನಾನು ಅರಗಿಸಿಕೊಳ್ಳಬೇಕು. ಯಾರೆದುರೂ ಬಾಯಿ ಬಿಡಬಾರದು. ಮುರಳಿ, ಶ್ರೀಧರ, ಸುಶೀಲಾ ಈ ಮೂವರಿಗಂತೂ ಏನನ್ನೂ ಹೇಳಕೂಡದು. ನಾನು ಈ ವಿಷಯವನ್ನು ಆಕಸ್ಮಾತಾಗಿ ಈ ಗಣೇಶಯ್ಯನಿಗೆ ಹೇಳಿಬಿಟ್ಟರೆ, ಇವನ ಮುಖಾಂತರ ಈ ವಿಷಯ ಎಲ್ಲ ಕಡೆಗೂ ಪ್ರಚಾರವಾಗಿ ಬಿಡುವ ಸಾಧ್ಯತೆಗಳಿವೆ. ಹಾಗೆಂದೇ ಈ ವಿಚಾರ ಯಾರಿಗೂ ಗೊತ್ತಾಗಬಾರದು. ಈ ಅಪ್ರಿಯ ಸತ್ಯ ಗೊತ್ತಿರುವುದೇ ಇಬ್ಬರಿಗೆ, ಡಾ|| ಸಿಂಗ್ ಅವರಿಗೆ ಮತ್ತು ನನಗೆ. ಇದು ಈ ಇಬ್ಬರನ್ನು ದಾಟಿ ಮೂರನೆಯವರ ಕಿವಿಗೇ ಬೀಳಬಾರದು. ಹೇಗೆತಾನೆ ಬಿದ್ದೀತು? ನಾನೇ ಈ ವಿಚಾರವನ್ನು ಮುಚ್ಚಿಡುತ್ತಿರುವಾಗ!

ಈಗ ಈ ಗಣೇಶಯ್ಯನಿಗೆ ಏನಾದರೊಂದು ಸುಳ್ಳು ಹೇಳಬೇಕು. ಇಲ್ಲವಾದಲ್ಲಿ ಮತ್ತೆ ಈ ಭಯಂಕರವಾರ್ತೆಯ ಸುಳಿವು ಅವನಿಗೆ ಹತ್ತೀತು, ಆ ಸುಶೀ ಏನಾದರೂ ಈ ಬಗ್ಗೆ ಕೇಳಿದರೆ, ಎದೆ ಒಡೆದು ಸಾಯುತ್ತಾಳೆ. ಈ ವರ್ತಮಾನ ಅವಳಿಗೆ ತಿಳಿಯಬಾರದು. ಇನ್ನು ಗಣೇಶಯ್ಯ ಸುಮ್ಮನೆ ಇರುವುದಿಲ್ಲ. ಪಾಪ ಅವನು ಡಾ|| ಸಿಂಗ್ ಅವರ ಕೊಠಡಿಯಿಂದ ಹೊರಗೆ ಬರುತ್ತಲೇ ತನ್ನ ಬಗ್ಗೆ ಅವರು ನುಡಿದ ಭವಿಷ್ಯವನ್ನು ಚಾಚೂ ತಪ್ಪದೆ ಹೇಳಿದ್ದ. ಅಂಥದ್ದರಲ್ಲಿ ಈಗ ನಾನಾದರೂ ಅವನಿಗೆ ನನ್ನ ವಿಷಯ ತಿಳಿಸದಿದ್ದರೆ ಇಲ್ಲದ ಸಲ್ಲದ ಊಹಾಪೋಹಗಳಿಗೆ ಕಾರಣವಾದೀತು– 'ನೋಡ್ರಿ ಗಣೇಶಯ್ಯ... ಡಾಕ್ಟ್ರು ಹೇಳಿದ್ರು. ನಿಮಗೆ ಎಂಥದ್ದೂ ರೋಗ ಇಲ್ಲ–ಬರೀ ಮನೆ ಹೆಂಗಸರ ಮಾತುಕೇಳಿ ಬಂದುಬಿಟ್ಟಿದೀರಿ... ನಿಮ್ಮ ಹಾರ್ಟ್ ತುಂಬಾ